# ಕಾಗೆ ಬಂಗಾರ

ಬಂಗಾರದ ಬಣ್ಣ, ಹೊಳಪು ಮತ್ತು ಯಾವ ಗುಣಕ್ಕೂ ಹೋಲಿಕೆಯಾಗದ ಮತ್ತು ವಿರುದ್ಧ ಲಕ್ಷಣ ಹೊಂದಿರುವ ಸಿಲಿಕಾನ್ (ಎಸ್‌ಐ) ಸಂಯುಕ್ತವಿದು. ಬಂಗಾರಕ್ಕೂ ಮತ್ತು ಕಾಗೆಗೂ ಯಾವ ಸಂಬಂಧವಿಲ್ಲದಿದ್ದರೂ ಹೆಸರಿಗಷ್ಟೇ 'ಕಾಗೆ ಬಂಗಾರ' ! ಇದನ್ನು ಅಭ್ರಕವೆಂತಲೂ ಕರೆಯುತ್ತಾರೆ. ಇದೊಂದು ಅಲೋಹ ಸಂಯುಕ್ತ. ಜಾರುವ ಪದರು– ಪದರು ರಚನೆಯನ್ನು ಹೊಂದಿದ್ದು ಅಪಾರದರ್ಶಕವಾಗಿರುತ್ತದೆ. ಆದರೆ ಪದರು, ಪದರಾಗಿ ಸೀಳುತ್ತಾ ಹೋದಂತೆ (ಸುಲಭವಾಗಿ ಸೀಳಬಹುದು) ಪಾರದರ್ಶಕ, ಹೊಳಪು ವಸ್ತುವಾಗುತ್ತದೆ. ಆಗ ಒಣಗಲು ಹಾಕಿದ ಹಪ್ಪಳದಂತೆ ಕಾಣುವುದರಿಂದ ಕಾಗೆಗಳು ಹೊತ್ತಯ್ಯಬಹುದೇನೋ? ವಿಚಿತ್ರವೆಂದರೆ, ಎಷ್ಟೇ ಸೂಕ್ಷ್ಮಾತಿಸೂಕ್ಷ್ಮ (ಪರಮಾಣು ಮಟ್ಟಕ್ಕೆ) ಮಟ್ಟಕ್ಕೆ ಸೀಳಿದರೂ ತನ್ನ ಪದರು ರಚನೆಯನ್ನು ಉಳಿಸಿಕೊಳ್ಳುತ್ತದೆ. ಶುದ್ಧ ರೂಪದ ಸಿಲಿಕಾನ್ ವಿದ್ಯುತ್ ವಾಹಕ, ಬೆಳಕಿನಿಂದ ವಿದ್ಯುತ್ ಪಡೆಯಲು ಇದನ್ನೀಗ ವ್ಯಾಪಕವಾಗಿ ಬಳಸುತ್ತಾರೆ (Solar Electric Plates). ಅಶುದ್ಧವಾಗಿದ್ದಾಗ ಅಲೋಹದ ಎಲ್ಲ ಗುಣ–ಲಕ್ಷಣ ಹೊಂದಿದ್ದರೆ, ಶುದ್ಧವಾದಾಗ ಲೋಹದ ಲಕ್ಷಣಗಳನ್ನು ಪಡೆದುಕೊಳ್ಳುತ್ತದೆ.

**-ಎಸ್.ಓಂಕಾರಯ್ಯ ತವನಿಧಿ, ದಾವಣಗೆರೆ**





# ಕಾಗದದ ಬುಟ್ಟಿ

ಇದು ಕಾಗದದ ಬುಟ್ಟಿ! ರದ್ದಿ ಕಾಗದಗಳನ್ನು ಒಂದೆಡೆ ಸೇರಿಸಿ ಕಸವನ್ನೇ ರಸವನ್ನಾಗಿ ಮಾಡಿದ್ದಾರೆ. ಅದಕ್ಕೆ ಒಪ್ಪುವ ಬಣ್ಣವನ್ನೂ ಲೇಪಿಸಿ ಒಳಗಡೆ ಹೂ ಗೊಂಚಲು ಇಟ್ಟು ಸೌಂದರ್ಯ ಇಮ್ಮಡಿಸುವಂತೆ ಕೈಚಳಕ ತೋರಿಸಿದ್ದಾರೆ. ಇತ್ತೀಚೆಗೆ ಉತ್ತರ ಕನ್ನಡದ ಸಿದ್ದಾಪುರದಲ್ಲಿ ನಡೆದ ಕಲಾ ಪ್ರದರ್ಶನದಲ್ಲಿ ವಿದ್ಯಾರ್ಥಿಯೋರ್ವ ತಯಾರಿಸಿದ ಈ ಬುಟ್ಟಿ ಎಲ್ಲರನ್ನೂ ಆಕರ್ಷಿಸಿತು.

**-ಡಾ.ಸ್ನೇಹಾಲಿ ಗಾಂವ್ಕರ ತೇಲಂಗಾರ, ಯಲ್ಲಾಪುರ**

# ಎಂತಹ ದಿನಗಳವು!

ಕೆಲವೊಮ್ಮೆ ನಮಗೆ ಹಳೆಯ ವಸ್ತುಗಳು ಮನೆಯಲ್ಲಿ ಸಿಕ್ಕಿದಾಗ ಅದರಿಂದ ಅನೇಕ ವಿಷಯಗಳು ತಿಳಿಯುತ್ತವೆ. ಅಲ್ಲದೇ ಅಂತಹ ವಸ್ತುವಿನ ಬಗ್ಗೆ ಓದಿದಾಗ ಮೈ ರೋಮಾಂಚನಗೊಳ್ಳುತ್ತದೆ. ಅಂತಹ ಅಪರೂಪದ ಎರಡು ವಸ್ತುವಿನ ಹಳೆಯ ಬಿಲ್ಲುಗಳು ಚಿತ್ರದಲ್ಲಿದೆ. ಮೊದಲನೆಯದು ಹೋಟೆಲಿನದು, 1971ರಲ್ಲಿ ಮಸಾಲೆ ದೋಸೆ 2ಕ್ಕೆ ರೂ. 1, ಮತ್ತು ಕಾಫಿ 2ಕ್ಕೆ ರೂ.1, ತೆರಿಗೆ ಎಲ್ಲಾ ಸೇರಿ ಒಟ್ಟು 2.16 ರೂಪಾಯಿ. ಹಾಗೇ ಇಂಧನಕ್ಕೆ 1963ರಲ್ಲಿ 5 ಲೀಟರ್‌ಗೆ ರೂ. 3.60 ದರ ಇತ್ತು. ಈಗಿನ ದರ ಮತ್ತು ಆಗಿನ ದರ ನೋಡಿದರೆ ಮೈ ರೋಮಾಂಚನವಾಗುತ್ತದೆ ಅಲ್ಲವೆ?

**-ಎಸ್.ನರೇಂದ್ರ ನಾಯಕ್, ಗಂಗೊಳ್ಳಿ**




